Threa tening Annonymous letters to Sriyuths Konandur Lingappa and Vatal Nagaraj.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಈದಿನ ನನಗೆ ಒಂದು ಅನಾಮಿಕ ಪತ್ರ ಬಂದಿದೆ. ನನ್ನ ಜೀವಕ್ಕೆ, ದೇಹಕ್ಕೆ ಅಪಾಯ ಒದಗಿಸತಕ್ಕಂಥ ಒಂದು ಬೆದರಿಕೆಯ ಪತ್ರ ಬಂದಿವೆ.

MR. DEPUTY SPEAKER.—If the hon. member is realy serious he may please pass it on to me.

† ಶ್ರೀ ಕೋಣಂದೂರು ಲಿಂಗಪ್ಪ.—ಹೆದರುವ ಪ್ರಶ್ನೆಯಲ್ಲ, ಯಾರು ಬರೆದಿದ್ದಾರೆ ಎಂದು ಗೊತ್ತಿಲ್ಲ, ಯಾರಾದರೂ ಬರೆಸಿದ್ದಾರೆ ಎಂದು ನಾನು ಹೇಳುತ್ತಿಲ್ಲ. ಆದರೆಲ್ಲ ಈ ರೀತಿ "ನೀವು ಕನ್ನಡ ಚಳುವಳಿಯ ಬಗ್ಗೆ ಬೈಯ್ಯುವುದನ್ನು ನಿಲ್ಲಿಸದಿದ್ದರೆ, ಜನರಲ್ ಹಾಸ್ಪಿಟಲ್‌ಗೆ ಬಂದು ನಿನಗೆ ಕೈಕಾಲು ಮುರಿಯುತ್ತೇವೆ, ನಿನಗೆ ರಿಪೇರಿ ಮಾಡುತ್ತೇವೆ. ವಾಟಾಳ್ ನುಡ್ಡಿಗೆ ನೀನು ಬಂದ್ರೆ ಮಾನ ಉಳಿಸಕ್ಕಿಲ್ಲ, ನೆನಪಿರಲಿ, ನಮ್ಮ ಛಲದಂಕಮಲ್ಲರ ಬಗ್ಗೆ ಯಾರೂ ಮಾತನಾಡಕೂಡದು. ಅವರ ಬಗ್ಗೆ ಮಾತನಾಡಿದ ಟಿ. ಆರ್. ಶಾಮಣ್ಣ, ರಾಜತಿಮ್ಮಯ್ಯನವರಿಗೆ ಸಹ ಮೊದಲು ರಿಪೇರಿ ಮಾಡಿದ್ದೆವು. ನಿನಗೆ ಇದು ಕಡೆಯ ಎಚ್ಚರಿಕೆ....." ಇಲ್ಲಿ ಯಾರ ಬಗ್ಗೆಯೂ ನಾನು ಆರೋಪ ಮಾಡುತ್ತಾ ಇಲ್ಲ. ಇಂಥ ಮನೋಭಾವದಿಂದ ಬೆದರಿಕೆ ಪತ್ರ ಬರೆಸಿ ನಮ್ಮನ್ನು ಬಾಯಿ ಮುಚ್ಚಿಸುತ್ತೇವೆಂದು ತಿಳಿದು ಕೊಳ್ಳುವುದು ಯಾರ ಜಾಯಮಾನದಲ್ಲೂ ಇಲ್ಲ. ಕನ್ನಡದ ಚಳುವಳಿಯ ಬಗ್ಗೆ ನನಗೆ ಅಪಾರವಾದ ಅಭಿಮಾನ ಇದೆ. ಈ ದಶಕದಲ್ಲಿ ಕನ್ನಡ ಚಳವಳಿಯನ್ನು ಮಾಡಿದವನು ನಾನು. ಅನಂತರ ವಾಟಾಳ್ ನಾಗರಾಜ್ ಅವರಿಂದ ಜೇಕಾದಷ್ಟು ಸೇವೆ ಸಂದಿದೆ. ಆದರೆ ಯಾವುದೇ ಚಳವಳಿಯಾಗಲೀ, ಕನ್ನಡ ಚಳುವಳಿಯಾಗಲಿ: ಸಮಾಜವಾದಿ ಚಳುವಳಿಯಾಗಲಿ, ಚಳುವಳಿಯ ಹೆಸರಿನಲ್ಲಿ ಹಿಂಸಾಕೃತ್ಯಗಳನ್ನು ನಡೆಸುವುದನ್ನು ನಾವು ಖಂಡಿತವಾಗಿಯೂ ವಿರೋಧಿಸುತ್ತೇವೆ. ಇದನ್ನು ಮಾತ್ರ ನಾನು ಒಪ್ಪತಕ್ಕಂಥವನಲ್ಲ. ಕನ್ನಡ ಚಳುವಳಿಯ ಬಗ್ಗೆ ನನಗೆ ಅಭಿಮಾನವಿಲ್ಲ ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ತಪ್ಪು. ಕನ್ನಡ ಚಳುವಳಿಯನ್ನು ಈ ದಶಕದಲ್ಲಿ ಪ್ರಾರಂಭ ಮಾಡಿದವನು ನಾನು ಇದು ಎಲ್ಲರಿಗೂ ಗೊತ್ತಿದೆ. ಇದು ಮಾನ್ಯ ವಾಟಾಳ್ ನಾಗರಾಜ ಅವರಿಗೂ ಗೊತ್ತಿದೆ. ಪೂರ್ಣಾತ್ಮ ಎ. ನಾ. ಕೃಷ್ಣರಾಯರು, ಮತ್ತು ದಿವಂಗತ ರಾಮಮೂರ್ತಿಯವರಿಗೆ ನಾನು ಕೃತಜ್ಞತೆಯನ್ನು ಈ ಸಂದರ್ಭದಲ್ಲಿ ಸಲ್ಲಿಸಬೇಕಾಗಿದೆ, ಮಾನ್ಯ ರಾಮಪ್ರಸಾದ್ ಅವರು ಇಲ್ಲಿಯೇ ಕುಳಿತಿದ್ದಾರೆ.

Mr. DEPUTY SPEAKER.—This evening please come to my room in the Legislators' home. If you are really serious please pass on that letter.

ಶ್ರೀ ಕಾಗೋಡು ತಿಮ್ಮಪ್ಪ.—ಮೊನ್ನೆ ಮಾತನಾಡುತ್ತಾ ಇರಬೇಕಾದರೆ ತಿಳಿದು ಬಂದದ್ದು ರಲ್ಲಿ ಜನರಲ್ ಹಾಸ್ಪಿಟಲ್‌ನಲ್ಲಿ ಕೆಲವು ಹುಡುಗರು ಸೇರಿದ್ದಾರೆ ಎಂದು ಅನುವಾನ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ನನಗೂ ಪತ್ರ ಬಂದಿದೆ, ಯಾರೋ ಬರೆದಿದ್ದಾರೆ, ಅದಕ್ಕೆ ಬೆಲೆ ಕೊಟ್ಟುಕೊಂಡು ಕುಳಿತು ಕೊಳ್ಳುವುದಾದರೆ ನೇಶದಲ್ಲಿ ಏನು ಬೇಕಾದರೂ ಮಾಡಬಹುದು. ನನಗೆ ಡಿ. ಎಂ. ಕ ಯವರು ಕೊ ಲೆಮಾಡುತ್ತೇವೆಂದು ಬರೆಯುತ್ತಾರೆ, ಏನು ಮಾಡವುದಕ್ಕೂ ಆಗುವುದಿಲ್ಲ. ವಿರೋಧ ಪಕ್ಷದಲ್ಲಿ ಕುಳಿತು ನಾವು ಗುದ್ದಾಡೋಣವೆ ?

ಶ್ರೀ ಕೋಣಂದೂರು ಲಿಂಗಪ್ಪ.—ವಿರೋಧ ಪಕ್ಷದಲ್ಲಿದ್ದು ಗುದ್ದಾಡುವ ಪ್ರಶ್ನೆಯಲ್ಲ, ವಿರೋಧ ಪಕ್ಷದಲ್ಲಿರುವವರು ನಾವೆಲ್ಲ ಒಂದೇ

Taking up some Notices by Members

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ನಾನು ಸಾರಿಗೆ ನಚಿವರ ಮೇಲೆ ಪ್ರಿವಿಲೇಜ್ ಮೊ ಷನ್ ಕೊಟ್ಟಿದ್ದೇನೆ. ಅವರು ಚಾಸಿಸ್ ಪರ್ಚೇಸ್ ಮಾಡುವುದರ ಬಗ್ಗೆ ಈ ಸಭೆಗೆ ಅಸತ್ಯ ವಾದಂಥ ಹೇಳಿಕೆ ಕೊಟ್ಟಿದ್ದಾರೆ. ಆ ಸಂಬಂಧದಲ್ಲಿ ಪ್ರಿವಿಲೇಜ್ ಮೋಷನ್ ಇದೆ. ಇನ್ನೊಂದು,

ರಾಯಚೂರ್‌ನಲ್ಲಿ ಡಿವಿಷನ್ ಹಾಕತಕ್ಕ ಬಗ್ಗೆ ಮಂತ್ರಿಗಳು ಕಾಗೋಡು ತಿಮ್ಮಪ್ಪನವರ ಕಾಲ್ ಅಟೆನ್ಷನ್‌ಗೆ ಉತ್ತರ ಕೊಟ್ಟ ಕಾಲದಲ್ಲಿ ಅಸತ್ಯವಾದ ಹೇಳಿಕೆ ಕೊಟ್ಟಿದ್ದಾರೆ. ಈ ಎರಡು ವಿಷಯಗಳ ಬಗ್ಗೆ ಪ್ರಿವಿಲೇಜ್ ಮೋಷನ್ ಇದೆ. ಇವುಗಳ ಚರ್ಚೆಗೆ ತಾವು ಅನುವು ಮಾಡಿಕೊಡಬೇಕು. ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಇಡಲಿಕ್ಕೆ ನಾನು ತಯಾರು ಇದ್ದೇನೆ. ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ತಾಲ್ಲೂಕು ಬೋರ್ಡಿನ ಬಗ್ಗೆ ರೂಲ್ 59ರ ಪ್ರಕಾರ ನೋಟೀಸ್ ಅನ್ನು ಕಳುಹಿಸಿದ್ದೇನೆ. ಅದನ್ನು ಇದುವರೆಗೂ ಚರ್ಚೆಗೆ ತೆಗೆದುಕೊಳ್ಳಲಿಲ್ಲ. ತಾಲ್ಲೂಕು ಬೋರ್ಡ್ ಅವಧಿ ಪೂರ್ಣವಾಗುತ್ತಾ ಇದೆ. ಸರ್ಕಾರಿ ಅಧಿಕಾರಿಗಳನ್ನು ತಾಲ್ಲೂಕು ಬೋರ್ಡ್‌ಗಳಿಗೆ ಒಳಪಡಿಸಬೇಕು ಎಂದು ಇದ್ದಾರೆ. ಇದರ ಬಗ್ಗೆ ಹೇಳಿಕೆ ಕೊಡಬೇಕು ಎಂದು ಕೇಳಿದ್ದೇನೆ.

Mr. DEPUTY SPEAKER.—You have given under what rule ?

Sri KAGODU THIMMAPPA.—Under Rule 59.

Mr. DEPUTY SPEAKER.—Is it posible to take it up now, or can we have it tomorrow ?

Sri M. MALLIKARJUNASWAMY (Minister for Comunity Development and social welfare).—My demand will be coming tomorrow for discussion. We will have it with the demand.—

ಶ್ರೀ ಎಚ್. ಡಿ. ದೇವೇಗೌಡ.—ಡಿಮ್ಯಾಂಡ್‌ನಲ್ಲಿ ಇದನ್ನು ಒಂದುಗೂಡಿಸುವುದು ಬೇಡ. ಚುನಾವಣೆ ನಡೆಯುವುದು ಒಂದು ಭಾಗ ಮತ್ತೊಂದು ಭಾಗ ಚುನಾವಣೆಗಳನ್ನು ನಡೆಸುವವರೆಗೆ ತಾಲ್ಲೂಕು ಬೋರ್ಡ್‌ಗಳ ಅವಧಿ ಮುಂದುವರಿಸಿಕೊಂಡು ಹೋಗಬೇಕು ಎಂದು ಎರಡು ಇಷ್ಯೂ ಇವೆ. ಇದಕ್ಕೆ ಪ್ರತ್ಯೇಕವಾಗಿ ಚರ್ಚೆಗೆ ಅವಕಾಶ ಮಾಡಬೇಕಾಗುತ್ತದೆ. ಮಂತ್ರಿಗಳು ಪ್ರತ್ಯೇಕವಾಗಿ ಉತ್ತರ ಹೇಳಲಿ.

Mr. DEPUTY SPEAKER.—The hon. Leader of the Opposition will please give some cut motions on that partieular motion. Even otherwise the hon. Members will be dilating upon the particular issue. The particular issue is upper most in the mind of Sri Thimmappa. I feel that it can be taken up with the demand because it is a point to be raised there. Sri Thimmappa can agree with it.

2-20 P.M.

ಶ್ರೀ ಕಾಗೋಡು ತಿಮ್ಮಪ್ಪ.—ಡಿಮಾಂಡ್ ಚರ್ಚೆ ಆಗುವ ಸಂದರ್ಭದಲ್ಲಿ ಸಮರ್ಪಕವಾಗಿ ಉತ್ತರ ಬಂದರೆ ಆಯಿತು ಇಲ್ಲದಿದ್ದರೆ ನಾಳೆದ್ದು ಪ್ರತ್ಯೇಕವಾಗಿ ಚರ್ಚೆಗೆ ತೆಗೆದು ಕೊಳ್ಳಬೇಕು.

Cancellation of Examinaeion Centrs at Nonavinakere.

ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).—ರೂಲ್ 63 ಪ್ರಕಾರ ನೋಟೀಸ್ ಕಳುಹಿಸಿದೆ. ನೊಣವಿನಕೆರೆಗೆ ಇರುವ ಎಕ್ಷಾಮಿನೇಷನ್ ಸೆಂಟರ್ ರದ್ದು ಮಾಡಿದ್ದಾರೆ, ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಅದು ಕೊಟ್ಟು ಬಹಳ ದಿವಸವಾಯಿತು. ಎಕ್ಷಾಮಿನೇಷನ್ ಇಷ್ಟರಲ್ಲೇ ಶುರು ಆಗುತ್ತಿದೆ.

Mr. DEPUTY SPEAKER.—We have to receive the statement from the Government. I will see that it is pursued. I can assure you that our department is anxious to get the reply as early as possible and have it,